**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕ 11.9.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್.ಆನಂದ್ | ಪಿ.ಡಬ್ಲ್ಯೂ-13 |
| ತಂದೆಯ/ಗಂಡನ ಹೆಸರು | : | ಸಾಹುಕಯ್ಯ | ಸಿ.ಡಬ್ಲ್ಯೂ-40 |
| ವಯಸ್ಸು | : | 41 | |
| ಉದ್ಯೋಗ | : | ಪೋಲಿಸ್ ಇನ್ಸ್ ಪೆಕ್ಟರ್ | |
| ವಾಸಸ್ಥಳ | : | ಕೆ.ಎಂ.ದೊಡ್ಡಿ, ಮಂಡ್ಯ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿನಾಂಕ 8.3.2019 ರಿಂದ 14.6.2019 ರವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 3.6.2019 ರಂದು ಈ ಕೇಸಿನ ಕಡತಗಳನ್ನು ಚಾಸ41 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ, ಅದೇ ದಿನ ಕೃತ್ಯ ನಡೆದ ಸ್ಥಳದ ಅಸೆಸ್‌ಮೆಂಟ್ ನೀಡುವಂತೆ ಚಾಸ32 ರವರಿಗೆ ಮನವಿಯನ್ನು ನೀಡಿರುತ್ತೇನೆ. ದಿನಾಂಕ 6.6.2019 ರಂದು ಚಾಸ32 ರವರಿಂದ ಆರೋಪಿಯ ಮನೆಗೆ ಸಂಬಂಧಪಟ್ಟ ಅಸೆಸ್ಸಮೆಂಟನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ಅಸೆಸ್ಸಮೆಂಟಿನ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ22 ಎಂದು, ಪಿ.ಡಿ.ಓ ರವರಿಗೆ ನೀಡಿದ ಮನವಿಯನ್ನು ನಿಪಿ23 ಎಂದು ಗುರುತಿಸಲಾಯಿತು. ಅದೇ ದಿನ ಆರೋಗ್ಯ ಮತ್ತು ಕುಟುಂಬ ಇಲಾಖೆಗೆ ಪತ್ರ ಬರೆದು ಆರೋಪಿಯು ನಿರ್ಲಕ್ಷತೆಯಿಂದ ಚಿಕಿತ್ಸೆ ನೀಡಿರುವ ಬಗ್ಗೆ ಅಭಿಪ್ರಾಯ ವರದಿ ಮತ್ತು ಆತನು ಅಧಿಕೃತ ವೈದ್ಯನೋ ಅಲ್ಲವೋ ಎಂದು ವರದಿ ನೀಡುವಂತೆ ಎರಡು ಪತ್ರಗಳನ್ನು ಅಂಚೆ ಮೂಲಕ ಕಳುಹಿಸಿರುತ್ತೇನೆ. ಸಾಕ್ಷಿದಾರರು ಸದರಿ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ24 ಮತ್ತು ನಿಪಿ25 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ24ಎ ಮತ್ತು ನಿಪಿ25ಎ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸ41 ರವರಿಗೆ ವರ್ಗಾಯಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ

ಪೋಲಿಸ್ ಠಾಣೆಯಿಂದ ಹಂಪಾಪುರ ಗ್ರಾಮವು 25 ಕಿ.ಮೀ ದೂರದಲ್ಲಿರುತ್ತದೆ ಎಂದರೆ ಸಾಕ್ಷಿದಾರರು ನಾನು 3 ತಿಂಗಳು ಮಾತ್ರ ಠಾಣೆಯಲ್ಲಿ ಕೆಲಸ ಮಾಡಿದ್ದು ಹಂಪಾಪುರ ಗ್ರಾಮಕ್ಕೆ ಭೇಟಿ ನೀಡಿರುವುದಿಲ್ಲ ಎನ್ನುವರು. ನಾನು ಚಾಸ32 ರವರಿಂದ ನಿಪಿ22 ರಂತೆ ವರದಿ ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು

ಹೊಮ್ಮರಗಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿರುವುದಿಲ್ಲ. ನಾನು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ